ಛತ್ರ ಖಾಲಿ ಇದೆ

ಶ್ರೀಮತಿ ಲೀಲಾ, ಶ್ರೀ ಎಚ್. ಚನ್ನಯ್ಯ ಕಲ್ಯಾಣ ಮಂಟಪ, CFTRI Quarters ಎದುರು, ವಾಲ್ಮೀಕಿ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.

ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕೆಲವೇ ದಿನಗಳು ಮಾತ್ರ ಲಭ್ಯ.

ಹೊಸದಾಗಿ ನಿರ್ಮಿಸಿರುವ ಕಲ್ಯಾಣ ಮಂಟಪ

ಅತ್ಯುತ್ತಮ ಸೌಕರ್ಯವಿರುವ, 13 ರೂಂಗಳುಳ್ಳ, 800 ಜನ ಕೂರುವ ಉತ್ತಮ ಸಭಾಂಗಣವಿದ್ದು, ಎಲ್ಲಾ ವಿಧವಾದ ಶುಭ ಸಮಾರಂಭಗಳಾದ ಮದುವೆ, ಹುಟ್ಟುಹಬ್ಬ, ವಾರ್ಷಿಕೋತ್ಸವಕ್ಕೂ ನೀಡಲಾಗುವುದು.

ಉತ್ತಮ ಪಾರ್ಕಿಂಗ್ ಸೌಲಭ್ಯವಿದೆ

ಸಂ: 9844932498

ಆಂದೋಲನ

ದಿನಪತ್ರಿಕೆ

ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

ಅತ್ಯಂತ ಕಡಿಮೆ ದರದಲ್ಲಿ ಅತ್ಯುತ್ತಮ ಸೌಕರ್ಯವುಳ್ಳ ಛತ್ರ ದೊರೆಯುತ್ತದೆ.

ವಿದ್ಯಾರಣ್ಯ ಕನ್ವೆನ್ಷನ್ ಹಾಲ್

(ಸ್ಟರ್ಲಿಂಗ್ ಥಿಯೇಟರ್ ಎದುರು)

ರೂ. 50,000 + ರೂ. 15,000 ಮಾತ್ರ ಮೈಸೂರು-8

ಕಂಠಿ ಕನ್ವೆನ್ಷನ್ ಹಾಲ್

2ನೇ ಹಂತ, ವಿಶ್ವೇಶ್ವರಯ್ಯ ನಗರ, ಮೈಸೂರು-8

ರೂ. 45,000 + ರೂ. 15,000 ಮಾತ್ರ.

98452-82558,
99804-11288, 97429-83888

ರಾಷ್ಟ್ರೀಯ ಹುಲಿ ಗಣತಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಸೋಮವಾರ ಆರಂಭವಾಗಲಿದ್ದು, ೬ ದಿನಗಳ ಕಾಲ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಅಷ್ಟೂದಿನ ಸಫಾರಿ ಬಂದ್ ಮಾಡಲಾಗಿದೆ.

ನಾಳೆಯಿಂದ ಹುಲಿ ಗಣತಿ ಆರಂಭ...

ಸೀಗಡಿ ತಿನ್ನದಂತೆ ಮುಸ್ಲಿಮರಿಗೆ ಫತ್ವಾ

ಸೀಗಡಿಯು ಮೀನಿನ ಪ್ರಭೇದಕ್ಕೆ ಸೇರುವುದಿಲ್ಲ. ಆದ್ದರಿಂದ ಮುಸ್ಲಿಮರು ಸೀಗಡಿಯನ್ನು ತಿನ್ನಬಾರದು ಎಂದು ಹೈದರಾಬಾದ್ ಜಾಮಿಯಾ ನಿಜಾಮಿಯಾ ಫತ್ವಾ ಹೊರಡಿಸಿದೆ.

ಗರಿಷ್ಠ: ೨೯° । ಕನಿಷ್ಠ: ೧೪°

ಬಿಸಿಲ ತಾಪ ಏರಿಕೆ, ಮಳೆ ಮೋಡಗಳು ದೂರ

ಸಂಪುಟ: ೪೭, ಸಂಚಿಕೆ: ೭, ರಾಷ್ಟ್ರೀಯ ಶಕ ೧೯೩೯ ಶಿಶಿರ: ಪುಷ್ಯ–ಮಾಘ ೧೭, ●ಷಷ್ಠಿ – ಉ.ಫಾಲ್ಗುಣಿ, ಭಾನುವಾರ, ಜ.೭, ೨೦೧೮, ದೂರವಾಣಿ: ೨೪೪೯೫೩೦೧, ೨೪೪೯೫೩೦೪, ೨೪೪೯೫೩೦೫, ಫ್ಯಾಕ್ಸ್: ೨೪೪೯೫೩೦೬, ಪುಟ : ೧೨+೪, ರೂ. ೩

ಲಿಂಗಾಯತ ಪ್ರತ್ಯೇಕ ಧರ್ಮ: ಕಾಲಾವಕಾಶ ಕೋರಿಕೆ

ವರದಿ ನೀಡಿಕೆಗೆ ೬ ತಿಂಗಳ ಕಾಲಾವಕಾಶಕ್ಕೆ ಸರ್ಕಾರದ ಮುಂದೆ ಬೇಡಿಕೆ ಇಟ್ಟ ನ್ಯಾ.ನಾಗಮೋಹನದಾಸ್ ಸಮಿತಿ

ಬೆಂಗಳೂರು,ಜ.೬–ಲಿಂಗಾಯತರನ್ನು ಪ್ರತ್ಯೇಕ ಧರ್ಮದ ವ್ಯಾಪ್ತಿಗೊಳಪಡಿಸಿ ಅಲ್ಪಸಂಖ್ಯಾತರ ಸ್ಥಾನಮಾನ ನೀಡಬೇಕು ಎಂಬ ಕೂಗಿನ ಹಿನ್ನೆಲೆಯಲ್ಲಿ ರಚನೆಯಾದ ಜಸ್ಟೀಸ್ ನಾಗಮೋಹನದಾಸ್ ನೇತೃತ್ವದ ಸಮಿತಿ ಇದೀಗ ತನಗೆ ವರದಿ ಸಲ್ಲಿಸಲು ಆರು ತಿಂಗಳ ಕಾಲಾವಕಾಶ ನೀಡುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಇದರೊಂದಿಗೆ ಪ್ರತ್ಯೇಕ ಲಿಂಗಾಯತ ಧರ್ಮ ಪರ–ವಿರೋಧ ನಡೆಯುತ್ತಿದ್ದ ಹೋರಾಟಕ್ಕೆ ಸದ್ಯಕ್ಕೆ ಕದನ ವಿರಾಮ ಘೋಷಿಸಿದಂತಾಗಿದ್ದು, ಚುನಾವಣೆ ಹೊಸ್ತಿಲಲ್ಲಿ ಆಳುವ ಪಕ್ಷಕ್ಕೆ ಇದು ವರದಾನವಾಗಿ ಪರಿಣಮಿಸಿದೆ.

ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡಬೇಕೇ? ಬೇಡವೇ?ಎಂಬ ಕುರಿತು ರಚನೆಯಾಗಿರುವ ಸಮಿತಿ ಶನಿವಾರ ವಿಕಾಸಸೌಧದಲ್ಲಿ ಸಭೆ ನಡೆಸಿ, ತದನಂತರ ಈ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದೆ.

ಅಲ್ಲಿಗೆ ವೀರಶೈವ–ಲಿಂಗಾಯತ ಧರ್ಮದ ವಿವಾದ ಶೈತ್ಯಾಗಾರ ಸೇರುವ ಲಕ್ಷಣಗಳು ಕಂಡುಬಂದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವವರೆಗೆ ಪ್ರತ್ಯೇಕ ಧರ್ಮದ ವಿವಾದ ಬಗೆಹರಿಯುವುದಿಲ್ಲ ಎಂಬುದು ಖಚಿತವಾಗಿದೆ.

ಲಿಂಗಾಯತ ಪ್ರತ್ಯೇಕ ಧರ್ಮ ಪರ–ವಿರೋಧ ಅಭಿಪ್ರಾಯಗಳನ್ನು ಸಮಾನ ಗೌರವದಿಂದ ಆಲಿಸಲು ಸಮಿತಿ ನಿರ್ಧಾರ

- ಸಮಿತಿ ರಚಿಸಿ ತಿಂಗಳೊಳಗೆ ವರದಿ ನೀಡುವಂತೆ ಸೂಚನೆ ನೀಡಿದ್ದ ಸರ್ಕಾರ
- ವಿಷಯ ವಿವಾದಕ್ಕೆ ಒಳಗಾಗಿರುವ ಹಿನ್ನೆಲೆಯಲ್ಲಿ ಸಮಿತಿಯಿಂದ ಕಾಲ ಅವಕಾಶ ಕೋರಿಕೆ
- ಕಾಲಾವಕಾಶಕ್ಕೆ ಒಪ್ಪಿಗೆ ನೀಡುವ ಸಾಧ್ಯತೆ ; ಕಾಂಗ್ರೆಸ್‌ಗೆ ಅನುಕೂಲವಾಗುವ ಸಂಭವ

> ಒಂದು ತಿಂಗಳಲ್ಲಿ ಎಲ್ಲರ ಅಭಿಪ್ರಾಯ ಆಲಿಸಿ ವರದಿ ತಯಾರಿಸುವುದು ಕಷ್ಟದ ಕೆಲಸ. ಹಾಗಾಗಿ ೬ ತಿಂಗಳ ಕಾಲಾವಕಾಶ ನೀಡಲು ಸರ್ಕಾರವನ್ನು ಕೋರುತ್ತೇವೆ.
>
> –ನ್ಯಾ.ನಾಗಮೋಹನ್‌ದಾಸ್

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ನ್ಯಾಯಮೂರ್ತಿ ನಾಗಮೋಹನದಾಸ್ ಅವರು, ವಿವಾದದ ಹಿನ್ನೆಲೆಯಲ್ಲಿ ಸರ್ಕಾರ ನನ್ನ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದೆ.ಒಂದು ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಿದೆ ಎಂದು ವಿವರ ನೀಡಿದರು.

ಆದರೆ ಒಂದು ತಿಂಗಳಲ್ಲಿ ಈ ಕುರಿತು ವರದಿ ನೀಡುವುದು ಕಷ್ಟದ ಕೆಲಸ. ಹೀಗಾಗಿ ವರದಿ ನೀಡಲು ಸಮಿತಿಗೆ ಆರು ತಿಂಗಳ ಕಾಲಾವಕಾಶ ನೀಡುವಂತೆ ಸರ್ಕಾರವನ್ನು ಕೋರುವುದಾಗಿ ಸ್ಪಷ್ಟಪಡಿಸಿದರು.

ಸಮಿತಿ ರಚನೆಯಾದ ನಂತರ ಒಟ್ಟು ೩೬ ಸಂಘ, ಸಂಸ್ಥೆಗಳು ಮತ್ತು ವ್ಯಕ್ತಿಗಳು ಪೂರಕ ದಾಖಲೆಗಳೊಂದಿಗೆ ತಮ್ಮ ಅಭಿಪ್ರಾಯ ಸಲ್ಲಿಸಿದ್ದಾರೆ. ಜ.೨೫ರ ತನಕ ಯಾರು ಬೇಕಿದ್ದರೂ ಈ ಸಮಿತಿಯ ಮುಂದೆ ಪೂರಕ ಸಾಕ್ಷ್ಯಾಧಾರಗಳೊಂದಿಗೆ ವಾದ ಮಂಡಿಸಬಹುದು ಎಂದು ವಿವರಿಸಿದರು.

ಸಮಿತಿ ಪ್ರತಿಯೊಬ್ಬರ ಅಭಿಪ್ರಾಯವನ್ನೂ ಗೌರವಿಸುತ್ತದೆ.ವ್ಯಕ್ತಿ ಎಷ್ಟೇ ದೊಡ್ಡವರಿರಲಿ, ಸಂಘ–ಸಂಸ್ಥೆಗಳು ಎಷ್ಟೇ ದೊಡ್ಡದಿರಲಿ ಅಥವಾ ಶ್ರೀ ಸಾಮಾನ್ಯರೇ ಇರಲಿ, ರೈತರು, ಮಹಿಳೆಯರು ಇರಲಿ. ಎಲ್ಲರ ಅಭಿಪ್ರಾಯಕ್ಕೂ ಸಮಾನ ಗೌರವ ನೀಡುತ್ತದೆ. ಅವರ ವಾದವನ್ನು ಪರಿಶೀಲಿಸುತ್ತದೆ ಎಂದು ಹೇಳಿದರು.

⏭ ೮

ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಅವರು ಬಿಜೆಪಿ ಹಿರಿಯ ಉಪಾಧ್ಯಕ್ಷ ವಿ. ಶ್ರೀನಿವಾಸ ಪ್ರಸಾದ್ ಅವರೊಂದಿಗೆ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಶನಿವಾರ ಮಾತುಕತೆ ನಡೆಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ಎಂ. ಶಿವಣ್ಣ, ಕೆ.ಆರ್. ಮೋಹನ್ ಕುಮಾರ್, ಸಿ. ಬಸವೇಗೌಡ ಮತ್ತಿತರರು ಚಿತ್ರದಲ್ಲಿದ್ದಾರೆ.

ವರುಣಾ, ಚಾಮುಂಡೇಶ್ವರಿಯಲ್ಲಿ ಬಿಜೆಪಿ ರಣತಂತ್ರ

ಪಕ್ಷ ಬಲವರ್ಧನೆಗೆ ಮಿಂಚಿನ ಸಂಚಾರ ನಡೆಸಿದ ಡಿ.ವಿ.ಸದಾನಂದಗೌಡ, ಆರ್.ಆಶೋಕ್

ಮೈಸೂರು,ಜ.೬– ಮುಂಬರುವ ಸಾರ್ವತ್ರಿಕ ಚುನಾವಣೆಗೆ ಭರ್ಜರಿ ಸಿದ್ಧತೆಯಲ್ಲಿರುವ ಬಿಜೆಪಿ ನಾಯಕರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಹಾಗೂ ಅವಿಭಜಿತ ಮೈಸೂರು ಜಿಲ್ಲೆಗೆ ಸೇರಿದ್ದ ಚಾಮರಾಜನಗರ ಜಿಲ್ಲೆಯಲ್ಲಿ ಪಕ್ಷದ ಬಲವರ್ಧನೆಗೆ ರಣತಂತ್ರ ರೂಪಿಸತೊಡಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುತ್ತಿರುವ ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪರ್ಧಿಸಲಿರುವ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಉಪಮುಖ್ಯಮಂತ್ರಿ ಹಾಗೂ ಇಲ್ಲಿನ ಉಸ್ತುವಾರಿ ಆರ್.ಆಶೋಕ್ ಅವರು ಶನಿವಾರ ಮಿಂಚಿನ ಸಂಚಾರ ನಡೆಸಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಭೇಟಿ ಮಾಡಿ ಚರ್ಚಿಸಿದರು.

ಇದೇ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಯೂ ಆದ ಡಿ.ವಿ.ಸದಾನಂದಗೌಡ ಅವರು, ಮಾಜಿ ಸಚಿವ ಹಾಗೂ ಬಿಜೆಪಿ ಹಿರಿಯ ಉಪಾಧ್ಯಕ್ಷ ವಿ.ಶ್ರೀನಿವಾಸಪ್ರಸಾದ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

> ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬಿಜೆಪಿಗೆ ಪೂರಕವಾದ ವಾತಾವರಣ ಇದೆ. ಶೇ.೮೦ ಸ್ಥಾನಗಳನ್ನು ನಾವು ಗೆಲ್ಲಬಹುದು.
>
> –ಡಿ.ವಿ.ಸದಾನಂದಗೌಡ

> ಧರ್ಮಗಳನ್ನು ಒಡೆಯುವುದರಲ್ಲಿ ಮಗ್ನರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರುಣ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಿಲ್ಲ ಈ ಬಾರಿ ಅವರಿಗೆ ಸೋಲು ಖಚಿತ
>
> –ಆರ್.ಅಶೋಕ್

⏭ ೫

ನಗು ನಗುತಾ ನಲಿ ನಲಿ... ಮೈಸೂರಿನ ಜೆ.ಪಿ.ನಗರದಲ್ಲಿರುವ ಒಡನಾಡಿ ಸೇವಾ ಸಂಸ್ಥೆಯ ಒಡಲು ಬಾಲಕರ ಪುನರ್ವಸತಿ ಕೇಂದ್ರದಲ್ಲಿ ಶನಿವಾರ ನಡೆದ ತಮ್ಮ ಮದುವೆ ಸಂಭ್ರಮದಲ್ಲಿ ಒಡನಾಡಿಯ ಮಕ್ಕಳೊಡನೆ ನೃತ್ಯದ ಹೆಜ್ಜೆ ಹಾಕುತ್ತಿರುವ ನವ ವಧು-ವರರಾದ ಪ್ರೀತಾ ವಿನ್ಸೆಂಟ್ ಮತ್ತು ಒಲಾಫ್ ಮೇಸನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

⏭ ವರದಿ ಪುಟ ೨

ಲಾಲುಗೆ ೩.೫ ವರ್ಷ ಜೈಲು

ಹೊಸದಿಲ್ಲಿ,ಜ.೬–ಬಹುಕೋಟಿ ರೂ. ಮೇವು ಹಗರಣದ ಪ್ರಮುಖ ಆರೋಪಿ, ಬಿಹಾರದ ಮಾಜಿ ಮುಖ್ಯಮಂತ್ರಿ ಹಾಗೂ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್‌ಗೆ ಮೂರೂವರೆ ವರ್ಷ ಜೈಲು ಶಿಕ್ಷೆ ಹಾಗೂ ೫ ಲಕ್ಷ ರೂ. ದಂಡ ವಿಧಿಸಲಾಗಿದೆ.

ಕಳೆದ ಮೂರು ದಿನಗಳಿಂದ ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದ್ದ ಶಿಕ್ಷೆ ಪ್ರಮಾಣವನ್ನು ರಾಂಚಿಯಲ್ಲಿರುವ ಸಿಬಿಐ ವಿಶೇಷ ನ್ಯಾಯಾಧೀಶ ಶಿವಪಾಲ್ ಸಿಂಗ್ ಅವರು ಶನಿವಾರ ಪ್ರಕಟಿಸಿದರು.

ಮೇವು ಹಗರಣಕ್ಕೆ ಸಂಬಂಧಿಸಿದ ಆರು ಪ್ರಕರಣಗಳ ಪೈಕಿ ದೇವಘಡ ಪ್ರಕರಣದ ೨೨ ಆರೋಪಿಗಳ ಪೈಕಿ ಲಾಲು ಪ್ರಸಾದ್ ಯಾದವ್ ಸೇರಿ ೧೫ ಆರೋಪಿಗಳು ದೋಷಿ ಎಂದು ರಾಂಚಿ ಸಿಬಿಐ ವಿಶೇಷ ನ್ಯಾಯಾಲಯ ಕಳೆದ ಡಿ.೨೩ರಂದು ತೀರ್ಪು ನೀಡಿತ್ತು. ಅಲ್ಲದೆ ಶಿಕ್ಷೆಯ ಪ್ರಮಾಣವನ್ನು ಜ. ೩ಕ್ಕೆ ಕಾಯ್ದಿರಿಸಿತ್ತು. ಆದರೆ ಶುಕ್ರವಾರ ಮೂರನೇ ಬಾರಿಗೆ ತೀರ್ಪನ್ನು ಮುಂದೂಡಿದ್ದು ಶನಿವಾರಕ್ಕೆ ತೀರ್ಪನ್ನು ಕಾಯ್ದಿರಿಸಿದ್ದರು.

ಆದರೆ ವಾದ–ಪ್ರತಿವಾದ ಆಲಿಸಲು ಹಾಗೂ ಲಾಲು ಬೆಂಬಲಿಗರಿಂದ ಕರೆಗಳು ಬಂದ ಹಿನ್ನೆಲೆಯಲ್ಲಿ ಶಿಕ್ಷೆ ಪ್ರಮಾಣ ಪ್ರಕಟಿಸುವುದನ್ನು ಮುಂದೂಡಲಾಗಿತ್ತು.

ಇದೇ ಪ್ರಕರಣ ಸಂಬಂಧ ಬಿಹಾರ ಮಾಜಿ ಮುಖ್ಯಮಂತ್ರಿ ಜಗನ್ನಾಥ ಮಿಶ್ರಾ ಸೇರಿ ಇತರೆ ಏಳು ಆರೋಪಿಗಳನ್ನು ಸಿಬಿಐ ವಿಶೇಷ ನ್ಯಾಯಾಧೀಶ ಶಿವಪಾಲ್ ಸಿಂಗ್ ಅವರು ಖುಲಾಸೆಗೊಳಿಸಿದ್ದರು.

ದೇವಘಡ ಖಜಾನೆಯಿಂದ ೯೦ ಲಕ್ಷ ರೂ. ಹಣವನ್ನು ಅಕ್ರಮವಾಗಿ ಪಡೆದುಕೊಂಡಿರುವ ಈ ಪ್ರಕರಣದಲ್ಲಿ ಲಾಲು ಹಾಗೂ ಮಿಶ್ರಾ ಸೇರಿ ೨೨ ಮಂದಿ ಆರೋಪಿಗಳಾಗಿದ್ದರು.

ಮೇವು ಹಗರಣದ ಆರೋಪಿಗೆ ೫ ಲಕ್ಷ ರೂ. ದಂಡದೊಂದಿಗೆ ಕೊನೆಗೂ ಶಿಕ್ಷೆ ಪ್ರಕಟ

ಮುಂಚೂಣಿಯಲ್ಲಿ ಕಾಂಗ್ರೆಸ್

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಗೆ ದಿನಗಣನೆ ಆರಂಭವಾಗುತ್ತಿದ್ದಂತೆ, ಕೇಂದ್ರ ಗುಪ್ತಚರ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಮುಂಚೂಣಿಯಲ್ಲಿದ್ದು, ೨ನೇ ಸ್ಥಾನಕ್ಕೆ ಬಿಜೆಪಿ ಮತ್ತು ಜಾ.ದಳ ನಡುವೆ ಹೋರಾಟ ನಡೆಯಲಿದ್ದು, ಯಾವುದೇ ಒಂದು ಪಕ್ಷಕ್ಕೆ ಬಹುಮತ ಸಿಗುವ ಸಾಧ್ಯತೆಗಳಿಲ್ಲ.

ಮೇ ಮೊದಲ ವಾರದಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದ್ದು, ಫೆಬ್ರವರಿ ಇಲ್ಲವೇ ಮಾರ್ಚ್‌ನಲ್ಲಿ ನೀತಿ ಸಂಹಿತೆ ಜಾರಿಯಾಗಲಿದೆ. ಹೀಗಾಗಿ ಮೋದಿ ಮತ್ತು ರಾಹುಲ್ ಗಾಂಧಿ ಸೇರಿದಂತೆ ಘಟಾನುಘಟಿ ನಾಯಕರು ರಾಜ್ಯಕ್ಕೆ ಬರಲಿದ್ದಾರೆ.

ಮೈಸೂರು NECC

ಕೋಳಿ ಮೊಟ್ಟೆ ಧಾರಣೆ

100ಕ್ಕೆ Rs. 400

ದೂರವಾಣಿ: 2425156

ಹೆಲ್ಮೆಟ್ ಧರಿಸಲು ಪೊಲೀಸರಿಗೆ ಕಟ್ಟಪ್ಪಣೆ

ಐಎಸ್‌ಐ ಹೆಲ್ಮೆಟ್ ಧರಿಸದ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ: ಡಾ.ಎ.ಸುಬ್ರಹ್ಮಣ್ಯೇಶ್ವರ ರಾವ್

ಮೈಸೂರು,ಜ.೬–ನಗರ ಪೊಲೀಸ್ ಇಲಾಖೆ ಸಿಬ್ಬಂದಿಗಳು ಕಡ್ಡಾಯವಾಗಿ ಐಎಸ್‌ಐ ಗುರುತಿನ ಹೆಲ್ಮೆಟ್‌ಗಳನ್ನು ಧರಿಸಿ ಬೈಕ್ ಸವಾರಿ ಮಾಡಬೇಕೆಂದು ನಗರ ಪೊಲೀಸ್ ಆಯುಕ್ತ ಡಾ.ಎ.ಸುಬ್ರಹ್ಮಣ್ಯೇಶ್ವರ ರಾವ್ ಅವರು ಸುತ್ತೋಲೆ ಹೊರಡಿಸಿದ್ದಾರೆ.

ಬಂದೋಬಸ್ತ್‌ಗೆ ನೀಡಲಾಗುವ ಹೆಲ್ಮೆಟ್ ಅನ್ನು ವಾಹನ ಸವಾರಿ ಮಾಡುವಾಗ ಬಳಸಬಾರದು. ಕರ್ತವ್ಯದಲ್ಲಿದ್ದಾಗಲೂ, ರಜೆಯಲ್ಲಿದ್ದಾಗಲೂ ಐಎಸ್‌ಐ ಗುರುತಿನ ಹೆಲ್ಮೆಟ್ ಧರಿಸಬೇಕು. ಇಲ್ಲವಾದರೆ ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಸಂಬಂಧಿಸಿದ ಠಾಣಾಧಿಕಾರಿಗಳು ಈ ಬಗ್ಗೆ ಸಿಬ್ಬಂದಿ ವರ್ಗದವರಿಗೆ ತಿಳಿ ಹೇಳಬೇಕು. ಹೆಲ್ಮೆಟ್ ಧರಿಸದೇ ಸಿಬ್ಬಂದಿಗಳು ಬೈಕ್ ಓಡಿಸಿದರೆ, ಘಟಕದ ಮುಖಸ್ಥರೇ ನೇರ ಹೊಣೆ. ಅವರ ವಿರುದ್ಧವೂ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

⏭ ೮

ಸ್ವಚ್ಛ ನಗರಕ್ಕೆ ಕೈಜೋಡಿಸಲು ಮನವಿ

ಮೈಸೂರಿಗರಿಗೆ ಖ್ಯಾತ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮನವಿ

ಮೈಸೂರು,ಜ.೬–ದೇಶದ ಸ್ವಚ್ಛ ನಗರ ಸಮೀಕ್ಷೆ ಪ್ರಕ್ರಿಯೆ ಆರಂಭವಾಗಿದ್ದು, ಸಾಂಸ್ಕೃತಿಕ ನಗರಿ ಮೈಸೂರಿಗೆ ಮತ್ತೊಮ್ಮೆ ದೇಶದ ನಂ. ಒನ್ ಸ್ವಚ್ಛನಗರಿ ಪ್ರಶಸ್ತಿಯ ಗರಿ ಮೂಡಲು ನಗರದ ಜನತೆ ಸಹಕರಿಸುವಂತೆ ಹಾಗೂ ಸಮೀಕ್ಷಾ ತಂಡಕ್ಕೆ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ನೀಡುವಂತೆ ಖ್ಯಾತ ಕ್ರಿಕೆಟಿಗ ಹಾಗೂ ಮೈಸೂರು ನಗರದ ಸ್ವಚ್ಛತಾ ರಾಯಭಾರಿ ಜಾವಗಲ್ ಶ್ರೀನಾಥ್ ಮನವಿ ಮಾಡಿದ್ದಾರೆ.

೨ ಬಾರಿ ನಂ.ಒನ್ ಸ್ಥಾನದಲ್ಲಿದ್ದ ಮೈಸೂರು ನಗರವನ್ನು ಮತ್ತೆ ಒಂದನೇ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಸಾರ್ವಜನಿಕರು, ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮೈಸೂರು ಮಹಾನಗರ ಪಾಲಿಕೆ ಸಿದ್ಧತೆಗಳನ್ನು ಭರ್ಜರಿಯಾಗಿ ನಡೆಸಿರುವ ಬೆನ್ನ ಹಿಂದೆಯೇ ಜಾವಗಲ್ ಶ್ರೀನಾಥ್ ಅವರು ಶನಿವಾರ ಬೆಳಿಗ್ಗೆ ನಗರಕ್ಕೆ ಆಗಮಿಸಿ ನಾಗರಿಕರ ಸಹಕಾರ ಕೋರಿದರಲ್ಲದೆ, ಸಾಮಾಜಿಕ ಜಾಲತಾಣದ ಮೂಲಕ ಅರಿವು ಮೂಡಿಸಲು ಮುಂದಾಗಿದ್ದಾರೆ.

⏭ ೮

ಸ್ವಚ್ಛನಗರಿ ರಾಯಭಾರಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರು ಸಾಮಾಜಿಕ ಜಾಲತಾಣದ ಮೂಲಕ ಸ್ವಚ್ಛ ನಗರಕ್ಕೆ ನಾಗರಿಕರಲ್ಲಿ ಮನವಿ ಮಾಡುತ್ತಿರುವುದು. ಪಾಲಿಕೆ ಆಯುಕ್ತ ಜಿ. ಜಗದೀಶ್, ಆರೋಗ್ಯಾಧಿಕಾರಿ ಡಾ. ಡಿ.ಜಿ. ನಾಗರಾಜ್ ಚಿತ್ರದಲ್ಲಿದ್ದಾರೆ.

ಟೋಲ್ ಫ್ರೀ ಸಂಖ್ಯೆ **೧೯೬೯**

www.swachhsurvekshan2018.org

ವೆಬ್ ಸೈಟ್ ವಿಳಾಸ

Sunday 7 December 2018

ಆಂದೋಲನ

ಅಂತರ ಜಾಲ ವಿಳಾಸ

andolana.epapertoday.com

ಸುದ್ದಿಗಾಗಿ

andolana@gmail.com

WANTED

- Cooks
- Restaurant Service
- Room Service Boys

for Hotel at Masinagudi near Ooty.

Contact

094430 86891